# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.

**ಎಸ್.ಸಿ. 52/2024**

1. ಯಾದಗಿರಿ ಗ್ರಾಮೀಣ ಪೊಲೀಸಠಾಣೆ ....ಫಿರ್ಯಾದಿ

ವಿರುದ್ಧ

1. ಸಿದ್ದಪ್ಪಾ ಮತ್ತು ಇತರರು .....ಆರೋಪಿತರು

<u>ದೋಷಾರೋಪಣೆ</u>

ನಾನು ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ಸಿದ್ದಪ್ಪಾ ತಂದೆ ಭೀಮಪ್ಪ @ ಭೀಮರಾಯ ದೊಡ್ಡಮನಿ, ವಯಸ್ಸುಃ 24 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ವಡ್ನಳ್ಳಿ ತಾಃ ಜಿಃ ಯಾದಗಿರಿ
2. ಶರಣಪ್ಪಾ ತಂದೆ ಭೀಮಪ್ಪ @ ಭೀಮರಾಯ ದೊಡ್ಡಮನಿ, ವಯಸ್ಸುಃ 40 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ವಡ್ನಳ್ಳಿ ತಾಃ ಜಿಃ ಯಾದಗಿರಿ
3. ಜೈಭೀಮ ತಂದೆ ಶವಭಕ್ತ ದೊಡ್ಡಮನಿ, ವಯಸ್ಸುಃ 19 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ವಡ್ನಳ್ಳಿ ತಾಃ ಜಿಃ ಯಾದಗಿರಿ
4. ಶಿವಭಕ್ತ ತಂದೆ ಭೀಮಪ್ಪ @ ಭೀಮರಾಯ, ವಯಸ್ಸುಃ 68 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ವಡ್ನಳ್ಳಿ ತಾಃ ಜಿಃ ಯಾದಗಿರಿ
5 ಅನೀಲ್ @ ಅನೀಲಕುಮಾರ ತಂದೆ ಭಾಗಪ್ಪಾ ದೊಡ್ಡಮನಿ, ವಯಸ್ಸುಃ 29 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ವಡ್ನಳ್ಳಿ ತಾಃ ಜಿಃ ಯಾದಗಿರಿ
6 ಶ್ರವಣಕುಮಾರ ತಂದೆ ಭಾಗಪ್ಪಾ ದೊಡ್ಡಮನಿ, ವಯಸ್ಸುಃ 31 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ವಡ್ನಳ್ಳಿ ತಾಃ ಜಿಃ ಯಾದಗಿರಿ
7 ಐಶ್ವರ್ಯ ಗಂಡ ಶರಣಪ್ಪಾ ದೊಡ್ಡಮನಿ, ವಯಸ್ಸುಃ 35 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ವಡ್ನಳ್ಳಿ ತಾಃ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಯಾದಗಿರಿ ಗ್ರಾಮೀಣ ಪೊಲೀಸ ಠಾಣಾ ಹದ್ದಿಯ ಪೈಕಿ ವಡ್ನಳ್ಳಿ ಸೀಮಾಂತರದಲ್ಲಿ ಫಿರ್ಯಾದಿ ಮತ್ತು ಆರೋಪಿತರ ಜಮೀನು ಅಕ್ಕಪಕ್ಕದಲ್ಲಿದ್ದು, ಆರೋಪಿತರ ಹೊಲದ ದಾರಿಯ ಸಂಬಂಧ ಮತ್ತು ದನಗಳು ಹೋಗಿ ಬರುವ ಸಂಬಂಧ ಫಿರ್ಯಾದಿದಾರರಿಗೆ ಆಗಾಗ ತಕರಾರು ಮಾಡುತ್ತಾ ಬಂದಿದ್ದು, ದಿಃ 08.05.2024 ರಂದು ಬೆಳಿಗ್ಗೆ 10.00 ಗಂಟೆ ಸುಮಾರು ಚಾಸಾ-1 ರವರು ತಮ್ಮ ಹೊಲದಲ್ಲಿರುವಾಗ ಪಕ್ಕದ ಹೊಲದ ಆರೋಪಿ 1 ನೇಯವರು ಎತ್ತುಗಳು ಚಾಸಾ-1 ರವರ ಕಲ್ಲಂಗಡಿ ಹೊಲದಲ್ಲಿ ಬಂದು ಮೇಯ್ದು, ಕಲ್ಲಂಗಡಿ ಬಳ್ಳಿ ತುಳಿದು, ಹಾಳಾಗುತ್ತಿವೆ ಅಂತಾ ಹೇಳಿದಕ್ಕೆ, ಆರೋಪಿತರ ಆದ ನೀವು ಅಕ್ರಮಕೂಟ ರಚಿಸಿಕೊಂಡು ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 143 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ದೊಂಬಿ ಮಾಡುವ ಉದ್ದೇಶದಿಂದ ಕೈಯಲ್ಲಿ ಕೊಡಲಿ ಮತ್ತು ಕಟ್ಟಿಗೆಯ ಬಡಿಗೆಗಳನ್ನು ಹಿಡಿದುಕೊಂಡು ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 147 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಕೈಯಲ್ಲಿ  ಕೊಡಲಿ ಮತ್ತು ಕಟ್ಟಿಗೆಯ ಬಡಿಗೆ ಹಿಡಿದುಕೊಂಡು ಹಲ್ಲೆ ಮಾಡುವ ಉದ್ದೇಶದಿಂದ ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 148 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಈ ಲೇ ಸೂಳೇ ಮಕ್ಕಳೇ ನಿಮ್ಮದು ಯಾವಾಗ ನೋಡಿದರು ಇದೇ ಆಯಿತು ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-3 ರವರು ನಮ್ಮ ತಂದೆಗೆ ಯಾಕೇ ಹೊಡಿಯುತ್ತೀರಿ ಅಂತಾ ಕೇಳಿದಾಗ ಆರೋಪಿ 3

ಮತ್ತು 4 ರವರು ಲೇ ಸೂಳೇ ಮಗನೇ ನಿನ್ನ ಸೊಕ್ಕು ಬಹಳ ಆಗಿದೆ, ನಿಮ್ಮ ಕಿರಿಕಿರಿ ಬಹಳ ಆಗಿದೆ ನಿಮ್ಮನ್ನು ಖಲಾಸ ಮಾಡಿದರೆ ನಮಗೆ ಕಿರಿಕಿರಿ ತಪ್ಪುತ್ತದೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 506 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಚಾಸಾ-4 ರವರು ಅಡ್ಡಬಂದಾಗ ಆರೋಪಿ 1 ಮತ್ತು 5 ರವರು ಲೇ ಮಗಳೇ ನಿನ್ನ ತಿಂಡಿ ಬಹಳ ಅದಾ ಮಗಳೇ ಎಂದು ಆಕೆಯ ಕೈಯಿಡಿದು ಎಳೆದಾಡಿ ಅವಮಾನ ಮಾಡಿದ್ದು, ಆಕೆಯ ಮಾನಭಂಗ ಉಂಟುಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 354 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

7. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 7 ನೇ ಆರೋಪಿತಳು ಚಾಸಾ-5 ರವರಿಗೆ ಕೈಯಿಂದ ಬೆನ್ನಿಗೆ ಗುದ್ದಿ, ಕಾಲಿನಿಂದ ಒದ್ದು, ಒಳಪೆಟ್ಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 323 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

8. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ 1 ಮತ್ತು 2 ರವರು ಬಡಿಗೆಯಿಂದ ಚಾಸಾ-1 ರವರ ಬಲಗಾಲ ಕೆಳಗೆ ಹೊಡೆದು, ಗುಪ್ತಪೆಟ್ಟು ಮಾಡಿ, ಕೆಳಗಡೆ ಬಿಳಿಸಿ ಬೆನ್ನಿಗೆ ಕಟ್ಟಿಗೆಯಿಂದ ಹೊಡೆದು ಒಳಪೆಟ್ಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 324 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

9. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಚಾಸಾ-3 ರವರು ನಮ್ಮ ತಂದೆಗೆ ಯಾಕೆ ಹೊಡೆಯುತ್ತೀರಿ ಅಂತಾ ಅಂದಾಗ ಆರೋಪಿ 3 ಮತ್ತು 4 ರವರು ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕೊಡಲಿಯಿಂದ ಆತನ ತಲೆಗೆ ಹೊಡೆದು ರಕ್ತಗಾಯ ಮಾಡಿದ್ದು, ಆಗಾ ಸತ್ತೆನೆಪ್ಪೊ ಅಂತಾ ನೆಲಕ್ಕೆ ಬಿದ್ದಾಗ ಅದೇ ಕೊಡಲಿ ತಿರಿವಿ ಬೆನ್ನಿಗೆ, ಬಲಗಾಲಿಗೆ ಹೊಡೆದಿದ್ದರಿಂದ ತೀವ್ರಸ್ವರೂಪದ ಪೆಟ್ಟಾಗಿದ್ದು, ಆ ಮೂಲಕ ನೀವು ಭಾರತೀಯ

ದಂಡ ಸಂಹಿತೆ ಕಲಂ. 307 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 06.11.2025 ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.